

# ನಿರ್ವಾಣ

■ ಪಿ.ಬಿ. ಪ್ರಸನ್ನ

'ಎಂಥಾ ಕಾಲ ಬಂತಲ್ವಾ? ಇಂಥದ್ದೊಂದನ್ನು ನಾನು ನನ್ನ ಜೀವಮಾನದಲ್ಲಿ ನೋಡ್ತೇನೆ ಅಂತ ಎಣಿಸಿಯೇ ಇರ್ಲಿಲ್ಲ'. ದಯಾನಂದ ತನ್ನ ಪಕ್ಕ ಕೂತಿದ್ದ ಸಾಧುವಿನ ಬಳಿ ಗೊಣಗಿದ. ಆ ಸಾಧು ಒಂದು ಕ್ಷಣ ಅವನ್ನು ನೋಡಿ ನೆಗ್ಯಾಡಿದ. ನಂತರ ಶೂನ್ಯದತ್ತ ನೋಡಿದ. ತನ್ನ ಜೋಳಿಗೆಯ ಒಳಗೆ ಕೈ ಹಾಕಿ ಚುಟ್ಟಾ ಒಂದನ್ನು ತೆಗೆದ. ಬೆಂಕಿ ಹಚ್ಚಿ ಪುಸು ಪುಸು ಅಂತ ಹೊಗೆ ಬಿಟ್ಟ. ಬೇಕಾ ಎಂಬಂತೆ ದಯಾನಂದನ ಎದುರು ಹಿಡಿದ. ಅವ ಬೇಡ ಎಂಬಂತೆ ತಲೆ ಆಡಿಸಿದ. 'ಈ ಕಾಲ ಅಂತ ಅಲ್ಲವೋ ತಮ್ಮಾ, ಎಲ್ಲ ಕಾಲವೂ ಹೀಗೆಯೇ. ಒಳಿತು ಕೆಡುಕು ಅಂತ ಇಲ್ಲ. ನಾವು ಒಳ್ಳೆಯವರಾದ್ರೆ ಊರು ಒಳ್ಳೇದು ಆಗಿ ಇರ್ತದೆ. ಇಲ್ಲಾಂದ್ರೆ ಎಲ್ಲವೂ ಕೆಟ್ಟದ್ದೇ' ಅಂದ. ಅಷ್ಟು ಹೊತ್ತಿಗೆ ಅವನ ಜೊತೆಗಾರರು ಇಬ್ಬರು ಭಿಕ್ಷಾಟನೆಗೆ ಹೊಗಿದ್ದವರು ಒಂದಿಷ್ಟು ರೊಟ್ಟಿ ಬಾಜಿ ತಂದರು. ಎಲ್ಲ ಹಂಚಿಕೊಂಡು ತಿನ್ನಲು ಸಿದ್ಧವಾದರು. 'ತಮ್ಮಾ, ಬಾ, ನೀನೂ ತಗೊ' ಅಂದ. ಒಮ್ಮೆ ಬೇಡ ಅಂದ. ಆದರೆ ಎರಡು ದಿನಗಳಿಂದ ಮನೆಬಿಟ್ಟು ನಡ್ದು ನಡ್ದು ಬೆಪ್ರಿ ಚಂಡಿ